**ದಿನಾಂಕಃ 17.10.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ವಾದಿ ಪರ ವಕೀಲರಿಂದ**

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತು. ವಾದಿ ಸರೋಜಮ್ಮ ನನ್ನ ತಂಗಿ ಎಂದರೆ ಸರಿ. 3 ರಿಂದ 7 ಮತ್ತು 11 ನೇ ಪ್ರತಿವಾದಿಗಳು ನನ್ನ ತಮ್ಮಂದಿರು ಎಂದರೆ ಸರಿ. 1ನೇ ಪ್ರತಿವಾದಿ ಸಾವಿತ್ರಮ್ಮ ನನ್ನ ಅಕ್ಕ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳು ನನ್ನ ಮತ್ತು ಉಳಿದ ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳಾಗಿದ್ದರೂ ವಿಭಾಗವಾಗಿರುವುದಿಲ್ಲ ಎಂಬುದನ್ನು ನಾನು ಸುಳ್ಳು ಎಂದು ಹೇಳಿದ್ದೇನೆ ಎಂದರೆ ಸರಿ. ದಾವಾ ಸ್ವತ್ತುಗಳು ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ನನ್ನ ತಂದೆ ಮತ್ತು ತಾಯಿಗೆ ಬಾಧ್ಯಪಟ್ಟ ಪಿತ್ರಾರ್ಜಿತ ಆಸ್ತಿ ದಾವಾ ಸ್ವತ್ತುಗಳು ಎಂದರೆ ಸರಿ. ಸದರಿ ದಾವಾ ಸ್ವತ್ತುಗಳು ವಿಭಾಗವಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆ ಹಾಜರು ಪಡಿಸಿಲ್ಲ. ವಾದಿಗೆ ಭಾಗವನ್ನು ಕೊಟ್ಟಿದ್ದೇವೆ ಅದರ ಸರ್ವೆ ನಂಬರು ಗೊತ್ತಿಲ್ಲ. ಸಾಕ್ಷಿಯು 50 ವರ್ಷಗಳ ಹಿಂದೆಯೇ ವಿಭಾಗವಾಗಿದೆ ಎಂದು ಉತ್ತರಿಸುತ್ತಾರೆ. ನಮ್ಮ ಮತ್ತು ವಾದಿಯ ಸಂಬಂಧಗಳು ನನ್ನ ಪ್ರಮಾಣ ಪತ್ರದ 4ನೇ ಪ್ಯಾರಾದಲ್ಲಿ ತಿಳಿಸಿರುವಂತೆ ಸರಿ ಇರುತ್ತದೆ. ನಾವು ಮತ್ತು ವಾದಿ ಒಟ್ಟು ಕುಟುಂಬದಲ್ಲಿ ವಾಸ ಇಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ. ವಾದಿ ಮತ್ತು ಪ್ರತಿವಾದಿಗಳು ಜಂಟಿ ಸ್ವಾಧೀನದಲ್ಲಿಲ್ಲ ಮತ್ತು ಶೆಡ್ಯೂಲ್ ಆಸ್ತಿಯಲ್ಲಿ ವಾದಿ ಯಾವುದೇ ಹುರುಳಿ, ಜೋಳ ಬೆಳೆಗಳನ್ನು ಬೆಳೆದುಕೊಂಡು ಬಂದಿಲ್ಲ ಎಂದು ತೋರಿಸುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ನಾನು ದಾವಾ ಐಟಂ 2 ರಲ್ಲಿ ಸ್ವಾಧೀನವಿದ್ದು ವ್ಯವಸಾಯ ಮಾಡಿಕೊಂಡು ಬರುತ್ತಿರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಅಂದರೆ ಕಂದಾಯ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 2 ಸಿದ್ದಶೆಟ್ಟಿಯವರ ಆಸ್ತಿ ಎಂದು ಹೇಳುವುದು ಸರಿಯಲ್ಲ. ದಾವಾ ಐಟಂ 2 ಕ್ಕೆ ಸಂಬಂಧಪಟ್ಟಂತೆ ನಿಡಿ–11 ಪಹಣಿಯ ಕಾಲಂ ನಂ. 11 ರಲ್ಲಿ ಸರ್ಕಾರಿ ಬೀಳು ಎಂದು ಇದೆ ಎಂದರೆ ಸರಿ. ನಿಪಿ–34 ರಂತೆ ಸರ್ಕಾರಿ ಬೀಳು ಇದ್ದಿದ್ದು ಡಿಸಿ ಆದೇಶದ ಮೇರೆಗೆ restoration ಆಗಿ ನಮ್ಮ ತಂದೆ ಸಿದ್ದಶೆಟ್ಟಿಯವರ ಹೆಸರಿಗೆ ಎಂ ಆರ್ ಬಂದಿದೆ ಎಂದರೆ ಸರಿಯಲ್ಲ. ಸದರಿ ಎಂ ಆರ್ ನನ್ನ ಹೆಸರಿಗೆ ಮಾಡಿದ್ದರೂ ತಪ್ಪಾಗಿ ತಂದೆಯ ಹೆಸರು ಬಂದಿರುತ್ತದೆ. ಸದರಿ ನಿಪಿ–34 ರಲ್ಲಿ ಪಿತ್ರಾರ್ಜಿತ ಎಂದು ಇದೆ ಎಂದರೆ ಸರಿಯಲ್ಲ.

ನಾನೇ ಹೇಳಿರುವಂತೆ ಪ್ರತಿವಾದಿಗಳು ನನ್ನ ತಂದೆಯ ಮರಣದ ಬಳಿಕ ಮಾಲೀಕತ್ವ ಹಾಗೂ ಸ್ವಾಧೀನತೆಯನ್ನು ಹೊಂದಿರುತ್ತಾರೆ ಎಂಬುದು ಶುದ್ದಸುಳ್ಳಿನಿಂದ ಕೂಡಿರುತ್ತದೆ ಎಂದು ನಾನು ಹೇಳಿದ ಕಾರಣ ನಾನು ಕೂಡ ಮಾಲೀಕತ್ವದಲ್ಲಿ ಇಲ್ಲ ಎಂದು ಒಪ್ಪಿಕೊಂಡಂತೆ ಎಂದರೆ ಸರಿಯಲ್ಲ. ನಿಪಿ–34 ರಲ್ಲಿರುವ ವಿಚಾರಗಳು ಸುಳ್ಳು ಎಂದು ತೋರಿಸುವ ಬಗ್ಗೆ ನನ್ನ ಹೆಸರಿನಲ್ಲಿರುವ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನನ್ನ ಪ್ರಮಾಣ ಪತ್ರದ 11ನೇ ಕಂಡಿಕೆಯಲ್ಲಿರುವ ವಿಚಾರಗಳು ಸುಳ್ಳು ಎಂದು ಹೇಳಿದ್ದೇನೆಂದರೆ ಸರಿ. ನನ್ನ ತಂದೆಯ ಹೆಸರಿನಿಂದ ನನ್ನ ಹೆಸರಿಗೆ ಪಹಣಿ ಮಾಡಲು ನಾನು ಅರ್ಜಿ ಸಲ್ಲಿಸಿದ್ದೇನೆ.

**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.